# ಸವಣೂರಿನ ದೈತ್ಯ ಮರಗಳು

ಮಡಗಾಸ್ಕರ್ ದ್ವೀಪದ ಬಾವೊಬಾಬ್ ಹೆಸರಿನ ಮರಗಳು ಪ್ರಸಿದ್ಧವಾಗಿವೆ. ಇಲ್ಲಿನ ಕಾಡುಗಳು, ಅಷ್ಟೇನೂ ಮಳೆಯನ್ನು ಕಾಣವು. ವರ್ಷದಲ್ಲಿ ಸುಮಾರು 10 ತಿಂಗಳುಗಳ ಕಾಲ ಒಣಗುವ ಈ ಕಾಡುಗಳಲ್ಲಿನ ಮರಗಳು ಹಾಗೂ ವಿಚಿತ್ರವಾದ ಉಬ್ಬಿದ ಕಾಂಡಗಳನ್ನು ಹೊಂದಿರುತ್ತವೆ. ಅವುಗಳು ತಮ್ಮ ಉಬ್ಬಿದ ಕಾಂಡಗಳಲ್ಲಿ ನೀರನ್ನು ಸಂಗ್ರಹಿಸುತ್ತವೆ ಎಂಬುದು ವಿಶೇಷ. ಈ ಮರಗಳ ಆಯಸ್ಸು ಸುಮಾರು 1000–3000 ವರ್ಷಗಳು.

ಕಿತ್ತಳೆ ಮತ್ತು ಇತರೆ ಸಿಟ್ರಸ್ ಹಣ್ಣುಗಳಲ್ಲಿ ಲಭ್ಯವಾಗುವ ವಿಟಮಿನ್ ಸಿ ಪ್ರಮಾಣಕ್ಕಿಂತ ಹತ್ತು ಪಟ್ಟು ಹೆಚ್ಚು ವಿಟಮಿನ್ ಸಿ ಪ್ರಮಾಣವು ಈ ಮರಗಳ ಹಣ್ಣುಗಳಲ್ಲಿದೆ. ಹೀಗಾಗಿ ಔಷಧೀಯ ಗುಣಗಳ ಕಾರಣಕ್ಕೆ ಈ ಹಣ್ಣುಗಳನ್ನು ಸ್ಥಳೀಯರು ಸೇವಿಸುತ್ತಾರೆ. ಹೃದ್ರೋಗವನ್ನು ತಡೆಗಟ್ಟಲು ಮತ್ತು ಚಿಕಿತ್ಸೆ ನೀಡಲು ಇದನ್ನು ಬಳಸಲಾಗುತ್ತದೆ. ಈ ದೈತ್ಯ ಮರಗಳನ್ನು ನೋಡಲು ನೀವು ಮಡಗಾಸ್ಕರ್‌ನವರೆಗೆ ಹೋಗಬೇಕಾಗಿಲ್ಲ, ಏಕೆಂದರೆ ಬೆಂಗಳೂರಿನಿಂದ ಸುಮಾರು 370 ಕಿಮೀ ದೂರದ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ದೊಡ್ಡಹುಣಸೆ ಮಠದ ಮೈದಾನದಲ್ಲಿ ಮೂರು ದೈತ್ಯ ಬಾವೊಬಾಬ್ ಮರಗಳನ್ನು ನೋಡಬಹುದು. ಈ ಮರಗಳನ್ನು ಕೃಷ್ಣ ಪರಮಾತ್ಮ ನೆಟ್ಟಿದ್ದಾನೆ ಎಂಬುದು ಇಲ್ಲಿನವರ ನಂಬಿಕೆ. ಸಿದ್ದಿ ಬುಡಕಟ್ಟು ಜನಾಂಗದವರು ಆಫ್ರಿಕಾದಿಂದ ಬೀಜಗಳನ್ನು ಇಲ್ಲಿಗೆ ತಂದು ಬೆಳೆಸಿದರು ಎಂಬ ನಂಬಿಕೆಯೂ ಇದೆ. ಮಠದ ಮೈದಾನದಲ್ಲಿ ತ್ರಿಕೋನ ರಚನೆ ಮಾಡಿ, ಮರಗಳ ರಕ್ಷಣೆಗಾಗಿ ರಾಜ್ಯ ಸರ್ಕಾರದಿಂದ ಬೇಲಿ ಹಾಕಲಾಗಿದೆ. ಈ ಮರಗಳ ಸುತ್ತಳತೆ ಸರಾಸರಿ 15 ಮೀಟರ್ ಹಾಗೂ ಎತ್ತರ 15 ಮೀಟರ್.

–ಪ್ರಭು ಓ., ಬೆಂಗಳೂರು





# ತೂಗು ತೋಟ

ಚಿತ್ರದಲ್ಲಿ ಕಾಣುತ್ತಿರುವ ಬೆಳೆ ಬೆಳೆಯುವ ಮಾದರಿಯು ಮಿಶ್ರ ಬೆಳೆ ಬೆಳೆಯುವ ರೈತರಿಗೆ ಅತ್ಯಂತ ಹೆಚ್ಚು ಉಪಯುಕ್ತವಾದದ್ದು. ಈ ತರಕಾರಿ ತೋಟದಲ್ಲಿ ಸುಮಾರು ಮುನ್ನೂರು ಅಡಿ ಅಗಲದ ಚಪ್ಪರವನ್ನು ನಿರ್ಮಿಸಲಾಗಿದೆ. ಅದರಲ್ಲಿ ಬೆಳೆದಿರುವ ಯಾವ ಬೆಳೆಯೂ ನೆಲದ ಆಸರೆಯನ್ನು ಆಶ್ರಯಿಸಿಲ್ಲ. ಗ್ರೋ ಬ್ಯಾಗ್ ರೂಪದ ಹಲವು ಪ್ಲಾಸ್ಟಿಕ್ ಬ್ಯಾಗ್‌ಗಳಿಗೆ ಗೊಬ್ಬರ ಮಿಶ್ರಿತ ಮಣ್ಣನ್ನು ತುಂಬಿಸಿ ಅವುಗಳನ್ನು ಚಪ್ಪರಕ್ಕೆ ಅಳವಡಿಸಿದ ಕಂಬಿಗಳಿಗೆ ಕೋಲಿನ ಸಹಾಯದಿಂದ ಕಟ್ಟಲಾಗಿದೆ. ಈ ಬ್ಯಾಗ್‌ಗಳಲ್ಲಿ ಸೋರೆಕಾಯಿ, ಹಾಗಲಕಾಯಿ, ತುಪ್ಪರಕಾಯಿ ಸೇರಿದಂತೆ ನಾನಾ ರೀತಿಯ ಬಳ್ಳಿ ರೂಪದಲ್ಲಿ ಬೆಳೆಯುವ ಬೆಳೆಗಳನ್ನು ಬೆಳೆಯಲಾಗಿದೆ. ಹೀಗೆ ಬಳ್ಳಿಗಳನ್ನು ಬೆಳಸಿ ಪ್ಲಾಸ್ಟಿಕ್ ದಾರದಿಂದ ತೂಗು ಬಿಡಲಾಗಿದೆ. ಈ ಚಪ್ಪರದ ಕೆಳಗೆ ಹಲವು ಬಗೆಯ ಸೊಪ್ಪು, ಮೆಣಸು, ಟೊಮೆಟೊ ಗಿಡಗಳನ್ನು ಬೆಳೆಯಲು ಅವಕಾಶ ಇದೆ. ಈ ತೂಗು ತೋಟ ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯದ ಅಂಗಳದಲ್ಲಿ ಕಂಡುಬಂತು.

–ಜಾನಕಿ ಎಸ್, ಬಾಗಲಕೋಟೆ


## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly